# ಸೇವಾಪೂರ್ವ ತರಬೇತಿ ಕಾರ್ಯಕ್ರಮಗಳಲ್ಲಿ ಓದುವಿಕೆಯ ಸ್ಥಿತಿಗತಿ ಕುರಿತು ಶಿಕ್ಷಕ ಶಿಕ್ಷಕರು ಮತ್ತು ವಿದ್ಯಾರ್ಥಿ ಶಿಕ್ಷಕರ ಅಭಿಪ್ರಾಯಗಳ ಶೋಧನೆ

ಪೂಜಾ ಬಹುಗುಣ

***

## ಪೀಠಿಕೆ

ಶಾಲೆಗಳಲ್ಲಿ ಶಿಕ್ಷಕರು ನೀಡುವ ಓದುವಿಕೆಯ ಸೂಚನೆಗಳ ಗುಣಮಟ್ಟ ಎಂತಹುದೆಂಬುದು ಎಂದಿಗೂ ಗಂಭೀರವಾಗಿ ಆಲೋಚಿಸಬೇಕಾದ ಸಂಗತಿಯಾಗಿದೆ. ಏಕೆಂದರೆ ಓದುವ ಮತ್ತು ಬರೆಯುವ ಸಾಮರ್ಥ್ಯದ ಮೌಲ್ಯ ಭಾಷಾ ಪಠ್ಯಕ್ರಮಕ್ಕಷ್ಟೇ ಸೀಮಿತವಾದುದಲ್ಲ. ಇತರ ಅಧ್ಯಯನ ಶಿಸ್ತುಗಳಲ್ಲಿ ವಿದ್ಯಾರ್ಥಿಗಳು ಮಾಡುವ ಸಾಧನೆಗಳ ಮೇಲೂ ಅದು ಪ್ರಭಾವ ಬೀರುತ್ತದೆ. ಸಾಕ್ಷರತೆಯ ಕುರಿತ ತೀರಾ ಅಲ್ಪ ತಿಳಿವಳಿಕೆ ಮತ್ತು ತರಗತಿಯಲ್ಲಿ ಅರ್ಥಪೂರ್ಣವಾದ ಸಂವಾದ ಇಲ್ಲದಿರುವಿಕೆಗಳು ಬಹುತೇಕ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯಲು ಬಹುಮುಖ್ಯ ಕಾರಣವೆಂದು ಕುಮಾರ್ (1992) ಹೇಳುತ್ತಾರೆ. ತರಗತಿಯಲ್ಲಿ ಸಾಕ್ಷರತೆಯ ತಿಳಿವಳಿಕೆಯನ್ನು ವಿನ್ಯಾಸಗೊಳಿಸುವಲ್ಲಿ ಶಿಕ್ಷಕರ ಪಾತ್ರ ಬಹು ಮಹತ್ವದ್ದು. ಶಿಕ್ಷಕರ ನಂಬಿಕೆಗಳು ತರಗತಿಯ ಸಂವಹನ, ಸಾಕ್ಷರತಾ ತಿಳಿವಳಿಕೆ ಮತ್ತು ವಿದ್ಯಾರ್ಥಿಗಳ ಸಾಧನೆಯ ಸ್ವರೂಪವನ್ನು ಪ್ರಭಾವಿಸಬಲ್ಲವು. ಓದುವಿಕೆಯ ಕುರಿತಾದ ಶಿಕ್ಷಕರ ಬೋಧನಾ ವಿಧಾನವು ವಿದ್ಯಾರ್ಥಿಯ ಓದುವಿಕೆಯ ಸಾಮರ್ಥ್ಯವನ್ನು ಪ್ರಭಾವಿಸುತ್ತದೆ. ಆದಾಗ್ಯೂ ತರಗತಿಯಲ್ಲಿ ಪರಿಣಾಮಕಾರಿಯಾದ ಸಂವಾದವನ್ನು ನಡೆಸಲು ಅಗತ್ಯವಿರುವ ಶಿಕ್ಷಕರ ಕಲ್ಪನೆ ಮತ್ತು ಸಾಮರ್ಥ್ಯಗಳು ಅವರ ತರಬೇತಿ ಮತ್ತು ಶಿಕ್ಷಣದಿಂದ ಪ್ರಭಾವಿತವಾಗಿರುತ್ತವೆ ಎಂಬುದನ್ನು ಬಹಳ ಮುಖ್ಯವಾಗಿ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ (ಸಿನ್ಹಾ 2010). ಅದೇನೇ ಇರಲಿ, ಶಿಕ್ಷಕರು ತಾವೇ ಶಿಕ್ಷಕ ಶಿಕ್ಷಣ ಕಾರ್ಯಕ್ರಮದಿಂದ ರೂಪು ತಳೆದವರಾಗಿರುತ್ತಾರೆ. ಶಿಕ್ಷಕ ಶಿಕ್ಷಣ ಕಾರ್ಯಕ್ರಮದಲ್ಲಿ ಓದುವಿಕೆಯ ಕುರಿತಾಗಿ ಯಾವ ರೀತಿಯಲ್ಲಿ ಚರ್ಚಿಸಲಾಗುತ್ತದೆ ಎಂಬುದು ಶಿಕ್ಷಕರು ತರಗತಿಯನ್ನು ಹೇಗೆ ನಿರ್ವಹಿಸುತ್ತಾರೆ ಎಂಬುದನ್ನು ಪ್ರಭಾವಿಸುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಕ ತರಬೇತಿ ಕಾರ್ಯಕ್ರಮಗಳಲ್ಲಿ ನೀಡಲಾಗುವ ಓದುವಿಕೆ ಮತ್ತು ಓದುವಿಕೆಯ ತಿಳಿವಳಿಕೆಯ

ಕುರಿತಾಗಿ ಶಿಕ್ಷಕರ ದೃಷ್ಟಿಕೋನವು ಬಹಳ ಕುತೂಹಲಕರವಾದ ಸಂಗತಿಯಾಗಿದೆ. ಓದುವಿಕೆ ಮತ್ತು ಓದುವಿಕೆಯನ್ನು ತರಬೇತಿ ಕಾರ್ಯಕ್ರಮಗಳಲ್ಲಿ ಹೇಗೆ ನಿರ್ವಹಿಸಲಾಗುತ್ತದೆ ಎಂಬ ಬಗ್ಗೆ ಶಿಕ್ಷಕ ಶಿಕ್ಷಕರು ಹಾಗೂ ವಿದ್ಯಾರ್ಥಿ ಶಿಕ್ಷಕರ ಅಭಿಪ್ರಾಯಗಳನ್ನು ಶೋಧಿಸುವ ಮೂಲಕ ಈ ಕುರಿತಾದ ಅವರ ದೃಷ್ಟಿಕೋನವನ್ನು ಅರಿಯುವುದು ಈ ಪ್ರಬಂಧದ ಉದ್ದೇಶವಾಗಿದೆ. ಇದಕ್ಕಾಗಿ ದೆಹಲಿಯ ಮೂರು ವಿಧದ ಕೋರ್ಸುಗಳಿಂದ ಶಿಕ್ಷಕ ಶಿಕ್ಷಕರು ಹಾಗೂ ವಿದ್ಯಾರ್ಥಿ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಅವುಗಳೆಂದರೆ, ಬ್ಯಾಚುಲರ್ ಆಫ್ ಎಜುಕೇಷನ್ (ಬಿ.ಎಡ್), ಬ್ಯಾಚುಲರ್ ಆಫ್ ಎಲಿಮೆಂಟರಿ ಎಜುಕೇಷನ್ (ಬಿಎಲ್ಇಎಡ್ - ಹಿರಿಯ ಮಾಧ್ಯಮಿಕ ಶಾಲಾ ಹಂತದ ನಂತರ ನೀಡಲಾಗುವ ನಾಲ್ಕು ವರ್ಷದ ಸಂಯೋಜಿತ ವೃತ್ತಿಪರ ಪದವಿ ಕೋರ್ಸು) ಮತ್ತು ಎಲಿಮೆಂಟರಿ ಟೀಚರ್ ಎಜುಕೇಷನ್ (ಇಟಿಇ - ಎರಡು ವರ್ಷದ ಡಿಪ್ಲೊಮಾ ಕೋರ್ಸು).

ಮೊದಲಿಗೆ ನಾನು ಭಾರತೀಯ ಶಾಲಾ ತರಗತಿಗಳಲ್ಲಿ ಓದುವಿಕೆಯು ಯಾವುದನ್ನೆಲ್ಲ ಒಳಗೊಂಡಿರುತ್ತದೆ ಎಂಬುದನ್ನು ಚರ್ಚಿಸುತ್ತೇನೆ. ಬಳಿಕ ತಮ್ಮ ಕಾರ್ಯಕ್ರಮಗಳಲ್ಲಿ ಓದುವಿಕೆಯ ಸ್ಥಿತಿಗತಿಯ ಕುರಿತಾದ ಪ್ರಶಿಕ್ಷಕರ ಅಭಿಪ್ರಾಯಗಳನ್ನು ಪ್ರಸ್ತುತಪಡಿಸುತ್ತೇನೆ. ಅಂತಿಮವಾಗಿ ಈ ಕಾರ್ಯಕ್ರಮಗಳಲ್ಲಿ ಪಡೆದುಕೊಂಡ ಜ್ಞಾನವನ್ನು ತರಗತಿಯೊಳಗೆ ಅಳವಡಿಸುವಲ್ಲಿ ವಿದ್ಯಾರ್ಥಿ ಶಿಕ್ಷಕರು ಎದುರಿಸುವ ಸಮಸ್ಯೆಗಳನ್ನು ಪರಿಶೀಲಿಸುತ್ತೇನೆ.

**ಭಾರತೀಯ ಶಾಲಾ ತರಗತಿಗಳಲ್ಲಿ ಓದುವಿಕೆ**

ಭಾರತೀಯ ಶಾಲಾ ತರಗತಿಗಳಲ್ಲಿ ಓದುವಿಕೆ ವಿಸಂಕೇತೀಕರಣದ (ಡಿಕೋಡಿಂಗ್) ರೂಪದಲ್ಲಿರುತ್ತದೆ. ವಿಶೇಷವಾಗಿ, ಪ್ರಾರಂಭಿಕ ಹಂತಗಳಲ್ಲಿ, ಸಾಕ್ಷರತಾ ಬೋಧನೆಯು ಅರ್ಥಗಳಿಗಿಂತ ಶಬ್ದಗಳಲ್ಲಿ, ಸಮಗ್ರಕ್ಕಿಂತ ಅಂಶಗಳಲ್ಲಿ ಹೆಚ್ಚಾಗಿ ಕೇಂದ್ರೀಕೃತವಾಗಿರುತ್ತದೆ. ಪ್ರಾಥಮಿಕ ಹಂತದ ನನ್ನದೇ ಸ್ವಂತ ಬೋಧನಾನುಭವ ಇದಕ್ಕಿಂತ ಭಿನ್ನವಾದುದೇನಲ್ಲ. ಪ್ರಾರಂಭಿಕ ಹಂತದಲ್ಲಿ ವಿಸಂಕೇತೀಕರಣ ಕೌಶಲವನ್ನು ಬಲಪಡಿಸುವತ್ತ, ಅಂದರೆ ಅಕ್ಷರಮಾಲೆಯ ಅಕ್ಷರಗಳನ್ನು ಹಾಗೂ ಬಿಡಿ ಬಿಡಿಯಾದ ಪದಗಳನ್ನು ಕಲಿಸುವತ್ತ ಭಾಷಾ ಪಠ್ಯಕ್ರಮವು ಗಮನ ಹರಿಸುತ್ತದೆ. ಪ್ರಾರಂಭಿಕ ಹಂತದಲ್ಲಿ ಅರ್ಥ ಮಾಡಿಕೊಂಡು ಓದುವುದರತ್ತ ಗಮನ ಹರಿಸುವುದು ಸಾಧ್ಯವಿಲ್ಲ ಎಂದು ಶಿಕ್ಷಕರು ನಂಬಿರುತ್ತಾರೆ. ಏಕೆಂದರೆ ಆ ಹಂತದಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ಅಕ್ಷರಗಳ ಹಾಗೂ ಕಾಗುಣಿತಗಳ ಪರಿಚಯವಿರುವುದಿಲ್ಲ. ನಿಜ ಹೇಳಬೇಕೆಂದರೆ, ಪ್ರಾರಂಭಿಕ ಹಂತದ ಓದುವ ಕಾರ್ಯಕ್ರಮದ ಅತಿಮುಖ್ಯ ಉದ್ದೇಶ ಅಕ್ಷರಗಳನ್ನು ಜೋಡಿಸಿಕೊಂಡು ಓದುವ ಹಾಗೂ ಅವುಗಳನ್ನು ಪದಗಳ ರೂಪದಲ್ಲಿ ಸಂಯೋಜಿಸುವ ಕೌಶಲವನ್ನು

ಅಭಿವೃದ್ಧಿಪಡಿಸುವುದಾಗಿದೆ ಎಂದು ಶಿಕ್ಷಕರು ನಂಬಿರುತ್ತಾರೆ. ಓದುವಿಕೆ ಮತ್ತು ಅರ್ಥ ಮಾಡಿಕೊಳ್ಳುವಿಕೆಗೆ ಸಂಬಂಧವೇ ಇಲ್ಲದಂತೆ ಸುಮ್ಮನೆ ಗಟ್ಟಿಯಾಗಿ ಓದುವುದು ಶಾಲಾ ತರಗತಿಯ ಸಾಮಾನ್ಯ ಅಭ್ಯಾಸವಾಗಿರುತ್ತದೆ. ಅರ್ಥಪೂರ್ಣವಾಗಿ ಓದುವ ಕೌಶಲವನ್ನು ಬೆಳೆಸದ ಇಂತಹ ಅಭ್ಯಾಸವು ಓದುವ ಕಲಿಕೆಯನ್ನು ಇನ್ನೂ ಕಷ್ಟ ಸಾಧ್ಯವಾಗಿಸುತ್ತದೆ. ವಿದ್ಯಾರ್ಥಿಗಳು ಆಂತರಿಕ ನಿಯಂತ್ರಣವನ್ನು ಸಾಧಿಸಿಕೊಂಡು ವ್ಯವಸ್ಥಿತ ಕಾರ್ಯತಂತ್ರದ ಮೂಲಕ ಸಮರ್ಥ ಓದುಗರಾಗಿ ಬೆಳೆಯುವ ನಿಟ್ಟಿನಲ್ಲಿ ಕಲಿಸುವುದಿಲ್ಲ. ಉನ್ನತ ಹಂತಗಳಲ್ಲಿಯೂ ಸಹ ಶಿಕ್ಷಕರು ಪಠ್ಯ ಅಥವಾ ಕ್ಲಿಷ್ಟ ಪದಗಳ ವಿವರಣೆಯನ್ನಷ್ಟೇ ನೀಡುತ್ತಾರೆ. ಪಠ್ಯದೊಂದಿಗೆ ತೊಡಗಿಸಿಕೊಂಡು ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸುವ ಅವಕಾಶ ವಿದ್ಯಾರ್ಥಿಗಳಿಗೆ ಸಿಗುವುದೇ ಇಲ್ಲ. ಹಾಗಾಗಿ ವಿದ್ಯಾರ್ಥಿಗಳು ಸ್ವತಂತ್ರ ಓದುಗರಾಗುವ ಬದಲಾಗಿ ಓದಲು ಮತ್ತು ಪಠ್ಯವನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಕರನ್ನು ಅವಲಂಬಿಸುತ್ತಾರೆ.

**ಶಿಕ್ಷಕ ಶಿಕ್ಷಣ ಕಾರ್ಯಕ್ರಮದಲ್ಲಿ ಓದುವಿಕೆ**

ಈ ಹಿಂದೆ ವಿವರಿಸಿದಂತೆ, ತರಗತಿಯ ಕೋಣೆಯಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು. ವಿದ್ಯಾರ್ಥಿಗಳ ಕಲಿಕೆ ಹಾಗೂ ಸಾಧನೆಯ ಮೇಲೆ ಅವರ ನಂಬಿಕೆ, ನಿಲುವು ಹಾಗೂ ಅಭಿಪ್ರಾಯಗಳು ಪ್ರಬಲವಾದ ಪರಿಣಾಮ ಉಂಟು ಮಾಡುತ್ತವೆ. ಆದರೂ ತರಗತಿ ಕೋಣೆಯಲ್ಲಿ ಓದುವಿಕೆಯನ್ನು ಕಲಿಸುವಲ್ಲಿ ಎಡವಿದರೆ ಮತ್ತು ಮಕ್ಕಳಲ್ಲಿ ಓದುವಿಕೆಗೆ ಸಾಕಷ್ಟು ಪ್ರೋತ್ಸಾಹ ಸಿಗದಿದ್ದರೆ ಅದಕ್ಕೆ ಶಿಕ್ಷಕರನ್ನಷ್ಟೇ ಪೂರ್ತಿಯಾಗಿ ಹೊಣೆಗಾರರನ್ನಾಗಿ ಮಾಡುವುದು ಸಾಧುವಲ್ಲ. ಶಿಕ್ಷಕ ಶಿಕ್ಷಣ ಕಾರ್ಯಕ್ರಮದ ಮೂಲಕ ಶಿಕ್ಷಕರು ಓದುವಿಕೆಯ ಕುರಿತಾದ ತಿಳಿವಳಿಕೆ ಹಾಗೂ ಪರಿಣಿತಿಯನ್ನು ಯಾವ ಪ್ರಮಾಣದಲ್ಲಿ ಗಳಿಸಿರುತ್ತಾರೆ ಎಂಬುದನ್ನೂ ಪರಿಗಣಿಸಬೇಕಾಗುತ್ತದೆ. ಆದ್ದರಿಂದ ಓದುವಿಕೆಯ ಕುರಿತಂತೆ ಶಿಕ್ಷಕರ ತಿಳಿವಳಿಕೆಯ ಮೂಲ ಯಾವುದು ಎಂಬುದನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ಓದುವಿಕೆಯ ಸ್ಥಿತಿಗತಿಯ ಕುರಿತಾದ ಪ್ರಶಿಕ್ಷಕರ ಅಭಿಪ್ರಾಯಗಳೇನು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಓದುವಿಕೆಗೆ ಸಂಬಂಧಿಸಿದಂತೆ -ಸಿದ್ಧಾಂತ ಹಾಗೂ ಓದುವಿಕೆಯ ಬೋಧನಾ ವಿಧಾನ ಎರಡನ್ನೂ ಒಳಗೊಂಡಂತೆ- ಭಾಷಾ ಪಠ್ಯಕ್ರಮದ ಪರಿಣಾಮಕಾರಿತ್ವದ ಬಗ್ಗೆ ಪ್ರಶಿಕ್ಷಕರ ಅಭಿಪ್ರಾಯಗಳೇನು ಎಂಬುದನ್ನು ಈ ಸಂಶೋಧನಾ ಪ್ರಬಂಧದಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಶಿಕ್ಷಕ ಶಿಕ್ಷಕರು ವಿದ್ಯಾರ್ಥಿ ಶಿಕ್ಷಕರ ದೈನಂದಿನ ಕಲಿಕೆಯೊಂದಿಗೆ ವ್ಯವಹರಿಸುವುದರಿಂದ ವಿದ್ಯಾರ್ಥಿ ಶಿಕ್ಷಕರಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಶಿಕ್ಷಕ ಶಿಕ್ಷಕರೇ ಅತ್ಯುತ್ತಮ ತೀರ್ಪುಗಾರರಾಗಿದ್ದಾರೆ.

ಭಾಷಾ ಶಿಕ್ಷಣದ ಪಠ್ಯಕ್ರಮದಲ್ಲಿ ಓದುವಿಕೆಯ ಸ್ಥಿತಿಗತಿಯ ಕುರಿತಾಗಿ ಪ್ರಶಿಕ್ಷಕರ ಅನಿಸಿಕೆ ಏನು; ವಿದ್ಯಾರ್ಥಿ ಶಿಕ್ಷಕರು ಹೆಚ್ಚಿನ ಬೆಳವಣಿಗೆ ಹೊಂದುವ ನಿಟ್ಟಿನಲ್ಲಿ ಅವರ ಓದುವಿಕೆಯ ಕೌಶಲ ಹಾಗೂ ಧೋರಣೆಗಳನ್ನು ಅಭಿವೃದ್ಧಿಪಡಿಸಲು ಹಾಲಿ ಇರುವ ಪಠ್ಯಕ್ರಮ ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿದೆ; ಭಾಷಾ ಶಿಕ್ಷಣ ಪಠ್ಯಕ್ರಮದಲ್ಲಿ ಈ ಅಂಶವನ್ನು ಸೇರಿಸಿಕೊಳ್ಳುವ ಉದ್ದೇಶ ಮತ್ತು ಭಾಷಾ ಶಿಕ್ಷಣದಲ್ಲಿ ಓದುವಿಕೆಯ ಅಂಶಕ್ಕಾಗಿ ನಿಗದಿತ ಪಠ್ಯಕ್ರಮದ ಮೂಲಕ ಈ ಉದ್ದೇಶ ಎಷ್ಟರ ಮಟ್ಟಿಗೆ ಈಡೇರುತ್ತದೆ; ಮತ್ತು ಕೊನೆಯದಾಗಿ ಓದುವಿಕೆಯ ಸಿದ್ಧಾಂತ-ಪ್ರಮೇಯಗಳ ಕುರಿತಾಗಿ ಅವರಿಗೆ ಎಷ್ಟರ ಮಟ್ಟಿಗೆ ಜ್ಞಾನವಿದೆ ಎಂಬವುಗಳತ್ತ ನನ್ನ ಅಧ್ಯಯನ ಮುಖ್ಯವಾಗಿ ಗಮನ ಹರಿಸುತ್ತದೆ. ಶಿಕ್ಷಕ ಶಿಕ್ಷಕರು  ಮತ್ತು ವಿದ್ಯಾರ್ಥಿ ಶಿಕ್ಷಕರ ಸಂದರ್ಶನ ನಡೆಸಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ಮೊದಲಿಗೆ ವಿವಿಧ ಆಶಯಗಳನ್ನು ಗುರುತಿಸಿ ಬಳಿಕ ಅವುಗಳಡಿಯಲ್ಲಿ ಪ್ರಶಿಕ್ಷಕರ ಪ್ರತಿಕ್ರಿಯೆಗಳನ್ನು ವಿಂಗಡಿಸುವ ಮೂಲಕ ವಿಶ್ಲೇಷಣೆ ಪ್ರಾರಂಭವಾಯಿತು. ಉದಾಹರಣೆಗೆ, ಭಾಷಾ ಪಠ್ಯಕ್ರಮದಲ್ಲಿ ಓದುವಿಕೆಯ ಸ್ಥಿತಿಗತಿ, ಓದುವಿಕೆಯ ಉದ್ದೇಶಗಳು, ವಿವಿಧ ಓದುವಿಕೆಯ ಸಿದ್ಧಾಂತಗಳು ಇವೇ ಮುಂತಾದವುಗಳ ಕುರಿತ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ಹೀಗೆ ಸಂಗ್ರಹಿಸಲಾದ ಅಭಿಪ್ರಾಯಗಳಲ್ಲಿ ಎರಡು ಬಗೆಯ ಪ್ರತಿಕ್ರಿಯೆಗಳು ವ್ಯಕ್ತವಾದವು. ಒಂದು ಪ್ರತಿಕ್ರಿಯೆ ಓದುವಿಕೆಯ ಅಂಶ ತೃಪ್ತಿಕರವಾಗಿದೆ ಎಂಬುದನ್ನು ಸೂಚಿಸಿದರೆ ಮತ್ತೊಂದು ಪ್ರತಿಕ್ರಿಯೆ ವಿಮರ್ಶಾತ್ಮಕ ನಿಲುವುಗಳನ್ನು ವ್ಯಕ್ತಪಡಿಸಿತಲ್ಲದೇ ಈ ಅಂಶವನ್ನು ಸುಧಾರಿಸಬೇಕೆಂದು ಒತ್ತಾಯಿಸಿತು. ಬೋಧಕರನ್ನು ಅವರ ಅಭಿಪ್ರಾಯಗಳನ್ನು ಆಧರಿಸಿ ಎರಡು ಗುಂಪುಗಳಾಗಿ ವಿಂಗಡಿಸಲಾಯಿತು. ಒಂದು ಗುಂಪು ತಮ್ಮ ಕಾರ್ಯಕ್ರಮದಲ್ಲಿ ಹಾಲಿ ಇರುವ ಓದುವಿಕೆಯ ಸ್ಥಿತಿಗತಿಯೊಂದಿಗೆ ತೃಪ್ತಿ ಹೊಂದಿದ್ದವರನ್ನು ಒಳಗೊಂಡಿದ್ದರೆ ಮತ್ತೊಂದು ಗುಂಪು ತಮ್ಮ ಕಾರ್ಯಕ್ರಮದಲ್ಲಿ ಓದುವಿಕೆಯನ್ನು ನಿರ್ಲಕ್ಷಿಸಲಾಗಿದೆ ಎಂದು ಭಾವಿಸಿದ್ದವರನ್ನು ಒಳಗೊಂಡಿತ್ತು. ಎರಡೂ ಅಭಿಪ್ರಾಯಗಳ ವ್ಯತ್ಯಾಸಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

**ತಮ್ಮ ಕಾರ್ಯಕ್ರಮಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ  ಪ್ರಶಿಕ್ಷಕರ ಅಭಿಪ್ರಾಯಗಳು:**

ಮಕ್ಕಳು ಓದುವಿಕೆಯಲ್ಲಿ ಬಹಳ ಹಿಂದುಳಿದಿದ್ದಾರೆ ಎಂಬ ಅಂಶದ ಬಗ್ಗೆ ಎಲ್ಲಾ ಪ್ರಶಿಕ್ಷಕರೂ ಕಾಳಜಿ ವ್ಯಕ್ತಪಡಿಸಿದರು ಎಂಬುದು ಗಮನಾರ್ಹ ಮತ್ತು ಉತ್ತೇಜನವಿಲ್ಲದ ಬೋಧನೆ/ಕಲಿಕೆಯೇ ಇದಕ್ಕೆ ಮುಖ್ಯ ಕಾರಣವೆಂದೂ ಸಹ ಅವರೆಲ್ಲರೂ ನಂಬಿದ್ದರು. ಆದಾಗ್ಯೂ ಶಿಕ್ಷಕರ ಜ್ಞಾನ ಪ್ರವರ್ಧನೆಯಲ್ಲಿ ತರಬೇತಿಯ ಪಾತ್ರದ ಸಂಬಂಧವಾಗಿ ಅವರು ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಮೊದಲ ಗುಂಪಿನ ಶಿಕ್ಷಕ ಶಿಕ್ಷಕರು  ತಮ್ಮ ಕಾರ್ಯಕ್ರಮಗಳಲ್ಲಿ ಓದುವಿಕೆಯ ಸ್ಥಿತಿಗತಿಯ ಬಗ್ಗೆ

ಸಕಾರಾತ್ಮಕವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಓದುವಿಕೆಯ ಸ್ವರೂಪ ಕುರಿತಾಗಿ ತಮಗಿರುವ ತಿಳಿವಳಿಕೆಯ ಬಗ್ಗೆ ಮತ್ತು ಅದನ್ನು ಅಭಿವೃದ್ಧಿಪಡಿಸುವಲ್ಲಿ ತಾವು ವಹಿಸಬೇಕಾದ ಪಾತ್ರದ ಬಗ್ಗೆ ಶಿಕ್ಷಕರು ವ್ಯಾಪಕವಾಗಿ ಚರ್ಚಿಸಿದರು. ಆಶ್ಚರ್ಯದ ಸಂಗತಿ ಎಂದರೆ ಈ ಪ್ರಶಿಕ್ಷಕರ ಪೈಕಿ ಯಾರೊಬ್ಬರೂ ಓದುವಿಕೆಯ ಕುರಿತಾದ ಸೈದ್ಧಾಂತಿಕ ತಿಳಿವಳಿಕೆ ಹೊಂದಿರಲಿಲ್ಲ. ಅವರು ಓದುವಿಕೆಯ ಯಾಂತ್ರಿಕ ಕ್ರಿಯೆಯ ಕಡೆಗಷ್ಟೇ ಗಮನ ಹರಿಸಿದ್ದರು. ವಿದ್ಯಾರ್ಥಿ ಶಿಕ್ಷಕರಲ್ಲಿ ಸರಾಗವಾಗಿ, ಗಟ್ಟಿಯಾಗಿ, ಸರಿಯಾದ ಉಚ್ಚಾರಣೆಯೊಂದಿಗೆ ಹಾಗೂ ಸೂಕ್ತವಾದ ಧ್ವನಿಯ ಏರಿಳಿತದೊಂದಿಗೆ ಓದುವ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವುದು ಪಠ್ಯಕ್ರಮದ ಮುಖ್ಯ ಆಶಯವಾಗಿರತಕ್ಕದ್ದು ಎಂದು ನಂಬಿದ್ದರು. ಇದರ ಪರಿಣಾಮವಾಗಿ, ಓದುವಿಕೆಯ ಪಠ್ಯಕ್ರಮದ ಬಗ್ಗೆ ವಿದ್ಯಾರ್ಥಿ ಶಿಕ್ಷಕರು ನಡೆಸಿದ ಚರ್ಚೆಯೂ ಸಹ ಶಿಕ್ಷಕರು ಗಟ್ಟಿಯಾಗಿ ಓದಬೇಕು, ಕಷ್ಟಕರ ಪದಗಳ ಅರ್ಥವನ್ನು ವಿವರಿಸಬೇಕು ಮತ್ತು ಅಂತಿಮವಾಗಿ ಪ್ರಶ್ನೆ-ಉತ್ತರಗಳನ್ನು ಬರೆಯಬೇಕು ಎಂಬುದರ ಕಡೆಗೇ ಕೇಂದ್ರೀಕೃತವಾಗಿತ್ತು. ಇದು ಓದುವಿಕೆಯ ಕುರಿತಾದ ಶುದ್ಧ ಸಾಂಪ್ರದಾಯಿಕ ಪದ್ಧತಿಯಾಗಿದೆ. ಇದು ಪದಗಳನ್ನು ವಿಸಂಕೇತಿಕರಿಸಿ ಅವಕ್ಕೆ ಧ್ವನಿ ನೀಡುವುದಕ್ಕಷ್ಟೇ ಸೀಮಿತವಾದುದಾಗಿದ್ದು ಇದು ಓದುವಿಕೆಯ ಸಂಕೀರ್ಣವಾದ ಸಮಗ್ರವಾದ ಸ್ವರೂಪವನ್ನು ನಿರ್ಲಕ್ಷಿಸುತ್ತದೆ ಎಂದು ಈ ಪದ್ಧತಿಯನ್ನು ಈಗಾಗಲೇ ಸಾಕಷ್ಟು ಬಾರಿ ಟೀಕಿಸಲಾಗಿದೆ. ಈ ಗುಂಪಿನ ಬೋಧಕರ ಪ್ರಕಾರ ಗಟ್ಟಿಯಾಗಿ ಓದುವುದು ಮಕ್ಕಳ ಓದುವಿಕೆಯ ತಪ್ಪುಗಳನ್ನು ತಿದ್ದಲು ಬಳಸಲಾಗುವ ಕೇವಲ ಒಂದು ಬೋಧನಾ ವಿಧಾನದ ಪರಿಕರವಾಗಿದೆ. ಅವರ ಪ್ರಕಾರ ಬೋಧಕರಾದವರು ಒಂದು ಆದರ್ಶಮಯ ವಿಧಾನದಲ್ಲಿ ಓದಬೇಕು ಮತ್ತು ಅದನ್ನು ವಿದ್ಯಾರ್ಥಿ ಶಿಕ್ಷಕರು ಅನುಕರಿಸಬೇಕು. ನಿಸ್ಸಂಶಯವಾಗಿ, ಇಂತಹ ಶಿಕ್ಷಕರು ಓದುವಿಕೆಯ ಈ ಬೋಧನಾ ವಿಧಾನವನ್ನು ತಮ್ಮ ತರಗತಿಯಲ್ಲಿ ಶಿರಸಾವಹಿಸಿ ಪಾಲಿಸುತ್ತಾರೆ; ಇದು ಪಠ್ಯದ ಓದುವಿಕೆಗೂ ಪಠ್ಯದಲ್ಲಿನ ಅರ್ಥಕ್ಕೂ ಸಂಬಂಧವಿಲ್ಲ ಎಂದು ವಿದ್ಯಾರ್ಥಿಗಳು ನಂಬುವಂತೆ ಮಾಡುತ್ತದೆ. ನಿರ್ದಿಷ್ಟವಾಗಿ, ಇಟಿಇ ಪ್ರಶಿಕ್ಷಕರಿಗೆ ಓದುವಿಕೆಯ ಸೈದ್ಧಾಂತಿಕ ತಿಳಿವಳಿಕೆ ಇರಲಿಲ್ಲ. ಅವರ ಪ್ರಕಾರ ಓದುವುದೆಂದರೆ ಕೇವಲ ಅರ್ಥಗ್ರಹಿಸುವ ಕೌಶಲವಾಗಿದೆ.

ಇಂತಹ ಶಿಕ್ಷಕರಿಗೆ "ನಿಮ್ಮ ಕಾರ್ಯಕ್ರಮದಲ್ಲಿ ಓದುವಿಕೆಯ ಉದ್ದೇಶವೇನು, ಆಶಯವೇನು?" ಎಂಬ ಪ್ರಶ್ನೆ ಕೇಳಿದಾಗ ಅವರು "ಓದುವಿಕೆ ಶಿಕ್ಷಕರ ವ್ಯಕ್ತಿತ್ವವು ಸರ್ವಾಂಗೀಣ ಬೆಳವಣಿಗೆ ಹೊಂದಲು ನೆರವಾಗುತ್ತದೆ" ಎಂಬಂತಹ ಸರ್ವೇ ಸಾಮಾನ್ಯವಾದ ಹೇಳಿಕೆ ನೀಡುತ್ತಾರೆ. ಪ್ರಶಿಕ್ಷಕರಿಗೆ ಓದುವಿಕೆಯ ನಿರ್ದಿಷ್ಟವಾದ ಉದ್ದೇಶವೇನು ಎಂಬುದರ ಅರಿವಿರಲಿಲ್ಲ ಅಥವಾ ಆ ನಿಟ್ಟಿನಲ್ಲಿ ಅವರು ಯೋಚಿಸುವ ಪ್ರಯತ್ನವನ್ನೂ ಮಾಡಿರಲಿಲ್ಲ. ಅದೇ ರೀತಿ, ಶಿಕ್ಷಕ ಶಿಕ್ಷಕರು ಓದುವಿಕೆಯನ್ನು ಯಾವ

ರೀತಿಯಲ್ಲಿ ಗ್ರಹಿಸಿದ್ದರು ಎಂಬ ಸಂಗತಿಯೂ ಸಹ ಓದುವಿಕೆಯ ಬೋಧನಾ ವಿಧಾನದ ಮೌಲ್ಯಮಾಪನದ ಮೇಲೆ ಪರಿಣಾಮ ಬೀರಿತ್ತು. ಶಿಕ್ಷಕ ಶಿಕ್ಷಕರು  ಓದುವಿಕೆಯ ತಿಳಿವಳಿಕೆಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಶಿಕ್ಷಕರ ಬೆಳವಣಿಗೆಯ ಮೌಲ್ಯಮಾಪನಕ್ಕೆ ಯಾವುದೇ ನಿರ್ದಿಷ್ಟ ಮಾನದಂಡವನ್ನು ಸೂಚಿಸಲಿಲ್ಲ. ಬದಲಾಗಿ ಅವರು ಗಟ್ಟಿಯಾಗಿ, ದೋಷವಿಲ್ಲದ ಉಚ್ಚಾರದೊಂದಿಗೆ ಓದುವರೇ, ಕ್ಲಿಷ್ಟ ಪದಗಳಿಗೆ ಹಾಗೂ ಪಠ್ಯಗಳಿಗೆ ಅರ್ಥ ವಿವರಿಸುವರೇ ಎಂಬಿವುಗಳ ಆಧಾರದ ಮೇಲೆ ವಿದ್ಯಾರ್ಥಿ ಶಿಕ್ಷಕರ ಮೌಲ್ಯ ಮಾಪನ ಮಾಡಿದರು. ಮಕ್ಕಳು ಪಠ್ಯದೊಂದಿಗೆ ತೊಡಗಿಕೊಳ್ಳುವ ಅವಕಾಶವನ್ನು ವಿದ್ಯಾರ್ಥಿ ಶಿಕ್ಷಕರು ಕಲ್ಪಿಸಿಕೊಡುವರೇ ಇಲ್ಲವೇ ಎಂಬ ಬಗ್ಗೆ ಅವರಿಗೆ ಕಾಳಜಿ ಇಲ್ಲದಿರುವುದು ಅವರ ಅಭಿಪ್ರಾಯಗಳಿಂದ ವ್ಯಕ್ತವಾಯಿತು.

**ತಮ್ಮ ಕಾರ್ಯಕ್ರಮದಲ್ಲಿ ಓದುವಿಕೆಯನ್ನು ನಿರ್ಲಕ್ಷಿಸಲಾಗಿದೆ ಎಂಬ ಅನಿಸಿಕೆ ವ್ಯಕ್ತಪಡಿಸಿದ ಪ್ರಶಿಕ್ಷಕರ ಅಭಿಪ್ರಾಯಗಳು:**

ಎರಡನೆಯ ಗುಂಪಿನ ಶಿಕ್ಷಕ ಶಿಕ್ಷಕರು  ಪ್ರಸ್ತುತದಲ್ಲಿರುವ, ಓದುವ ಪ್ರಕ್ರಿಯೆ ಹಾಗೂ ಬೋಧನಾ ವಿಧಾನದ ಸಿದ್ಧಾಂತಗಳ ಬಗ್ಗೆ ತಕ್ಕಮಟ್ಟಿಗೆ ಉತ್ತಮ ತಿಳಿವಳಿಕೆಯನ್ನು ಹೊಂದಿದ್ದರು. ಅವರು ಎರಡು ಬಗೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು: ಮೊದಲನೆಯದು, ತಮ್ಮ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳಲ್ಲಿ ಶಿಕ್ಷಕರಿಗೆ ಓದುವಿಕೆಯ ಸೈದ್ಧಾಂತಿಕ ತಳಹದಿ ಇಲ್ಲದಿರುವುದು; ಎರಡನೆಯದು, ತರಗತಿಯ ಕೋಣೆಯಲ್ಲಿ ಈ ಸಿದ್ಧಾಂತಗಳನ್ನು ಅನ್ವಯಿಸಲು ಅವರಿಗಿರುವ ಅಸಾಮರ್ಥ್ಯ. ಈ ಎರಡೂ ವಿಷಯಗಳ ಕುರಿತಂತೆ ಅವರ ಅಭಿಪ್ರಾಯಗಳನ್ನು ಇಲ್ಲಿ ವಿವರವಾಗಿ ನೀಡಲಾಗಿದೆ.

ನಿರ್ದಿಷ್ಟವಾಗಿ ಪ್ರಾಥಮಿಕ ಶಿಕ್ಷಕರ ಶಿಕ್ಷಣ ಕಾರ್ಯಕ್ರಮದಲ್ಲಿ ಓದುವಿಕೆ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದ ಸಂಗತಿ ಎಂಬುದು ಈ ಗುಂಪಿನ ಎಲ್ಲಾ ಶಿಕ್ಷಕ ಶಿಕ್ಷಕರು ಗಳ ಅಭಿಪ್ರಾಯವಾಗಿತ್ತು. ಅಲ್ಲದೇ ಓದುವಿಕೆಯ  ಸಿದ್ಧಾಂತ ಪಠ್ಯಕ್ರಮದ ಒಂದು ಭಾಗವಾಗಿಯೂ ಇರಲಿಲ್ಲ ಹಾಗೂ ಅದಕ್ಕೆ ಪ್ರಮುಖ ಸ್ಥಾನವನ್ನೂ ಬೋಧನೆಯಲ್ಲಿ ನೀಡಿರಲಿಲ್ಲ. ಅವರ ಪ್ರಕಾರ, ಸಿದ್ಧಾಂತಗಳ ಹೆಸರಿನಲ್ಲಿ ಕೇವಲ ಕೆಲವೇ ಕೆಲವು ಆಶಯಗಳನ್ನು ಹಾಗೂ ಓದುವಿಕೆಯ ವಿಧಾನಗಳನ್ನು ವಿವರಿಸಿ ಚರ್ಚಿಸಲಾಯಿತು. ಈ ಶಿಕ್ಷಕ ಶಿಕ್ಷಕರು  ಸಮಕಾಲೀನ ಓದುವಿಕೆಯ ಸಿದ್ಧಾಂತಗಳನ್ನು ಬಲ್ಲವರಾಗಿದ್ದು ಇವು ಭಾಷಾ ಪಠ್ಯಕ್ರಮದ ಭಾಗವಾಗತಕ್ಕದ್ದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕಾಲಾವಕಾಶವಿಲ್ಲದುದರಿಂದ ಈ ಸಿದ್ಧಾಂತಗಳನ್ನು ಪಠ್ಯಕ್ರಮದಲ್ಲಿ ಸೇರಿಸಲಾಗಿಲ್ಲ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

ತರಗತಿ ಕೋಣೆಯಲ್ಲಿ ಸಿದ್ಧಾಂತಗಳನ್ನು ಅನ್ವಯಿಸುವ ಕುರಿತೂ ಶಿಕ್ಷಕ ಶಿಕ್ಷಕರು ಆತಂಕ ವ್ಯಕ್ತಪಡಿಸಿದರು, ಬಹುತೇಕ ಸಂದರ್ಭಗಳಲ್ಲಿ, ಓದುವಿಕೆಯ ಸಿದ್ಧಾಂತಗಳ ಬೋಧನೆಯನ್ನು ಕೇವಲ ಕಾಟಾಚಾರಕ್ಕೆ ಹೇಳಿಕೊಡಲಾಗುತ್ತದೆ ಎಂದೂ ಅವರಿಗೆ ಅನ್ನಿಸಿತು. ತತ್ಪರಿಣಾಮವಾಗಿ, ಹಳೆಯ ಅಭ್ಯಾಸಗಳು ಹಾಗೂ ಹೊಸ ಬೆಳವಣಿಗೆಗಳ ನಡುವಿನ ಅಂತರದಿಂದಾಗಿ ವಿದ್ಯಾರ್ಥಿ ಶಿಕ್ಷಕರು ಅನಿವಾರ್ಯವಾಗಿ ಪಾರಂಪರಿಕ ವಿಧಾನಗಳನ್ನು ಅವಲಂಬಿಸಬೇಕಾಯಿತು. ಪ್ರಶಿಕ್ಷಕರಿಗೆ ಸಿದ್ಧಾಂತ ಹಾಗೂ ಅಭ್ಯಾಸಗಳ ನಡುವಿನ ಅಂತರ ಗೊತ್ತಿಲ್ಲದಿರಲಿಲ್ಲ. ಅದಕ್ಕಾಗಿ ಶಿಕ್ಷಕ ಶಿಕ್ಷಕರು ಹಾಗೂ ವಿದ್ಯಾರ್ಥಿ ಶಿಕ್ಷಕರು ಇಬ್ಬರೂ ಸಹ ಸಾಕಷ್ಟು ಪ್ರಯತ್ನ ಮಾಡಬೇಕಾಗುತ್ತದೆ ಎಂಬುದನ್ನು ಒಪ್ಪಿಕೊಂಡರು. ಬಹಳಷ್ಟು ಸಂಖ್ಯೆಯ ವಿದ್ಯಾರ್ಥಿ ಶಿಕ್ಷಕರಿಗೆ ಅಸಮರ್ಪಕ ಸಮಯಾವಧಿಯ ಕಾರಣದಿಂದಾಗಿ ಈ ಸಮಸ್ಯೆ ಇನ್ನಷ್ಟು ಉಲ್ಬಣಿಸಿತು. ನಾಲ್ಕು ವರ್ಷದ ಬಿ.ಎಲ್.ಎಡ್. ಕಾರ್ಯಕ್ರಮದಲ್ಲಿಯೂ ಸಹ ಈ ಸಮಸ್ಯೆಯನ್ನು ಸಮರ್ಪಕವಾಗಿ ಚರ್ಚಿಸಲಾಗಿಲ್ಲ. ಈ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಹಂತದಲ್ಲಿ ಓದುವಿಕೆಗೆ ಸಾಕಷ್ಟು ಒತ್ತು ನೀಡಲಾಗಿತ್ತು. ಆದರೆ ಮಾಧ್ಯಮಿಕ ಶಾಲಾ ಬೋಧನೆ/ಕಲಿಕೆಯಲ್ಲಿ ಇದಕ್ಕೆ ತೃಪ್ತಿಕರವಾದ ಮಹತ್ವ ನೀಡಿಲ್ಲ. ಆದಾಗ್ಯೂ ಬಿ. ಇಎಲ್. ಇಡಿ. ಕಾರ್ಯಕ್ರಮದಲ್ಲಿ ಶಿಕ್ಷಕ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ವಿಚಾರಪೂರ್ಣ (ರಿಫ್ಲೆಕ್ಟಿವ್) ನಿಯತಕಾಲಿಕೆ ಹಾಗೂ ಪ್ರತಿಕ್ರಿಯಾತ್ಮಕ (ರೆಸ್ಪಾನ್ಸ್) ನಿಯತಕಾಲಿಕೆಗಳನ್ನು ನಿರ್ವಹಿಸುವುದು, ಇವೇ ಮುಂತಾದ ನಾವೀನ್ಯಪೂರ್ಣ ಪ್ರಯೋಗಗಳನ್ನು ಮಾಡಲು ಪ್ರಯತ್ನಿಸಿದ್ದರೂ ಅವರ ನಡುವೆ ಮುಖಾಮುಖಿ ಚರ್ಚೆಯ ಅಗತ್ಯವಿತ್ತು. ಸಿನ್ಹಾ ಅವರು ವಾದಿಸುವಂತೆ (2010), ತರಗತಿಯ ಸಂದರ್ಭದಲ್ಲಿ ಸಿದ್ಧಾಂತಗಳೆಂದರೇನು ಎಂಬುದನ್ನು ಶೋಧಿಸಬೇಕಾದುದು ಮುಖ್ಯ. ಆದರೆ ವಿದ್ಯಾರ್ಥಿ ಶಿಕ್ಷಕರ ಅನುಭವಗಳು ಮತ್ತು ಅವರು ಎದುರಿಸುವ ಸವಾಲುಗಳಿಗೂ ಗಮನ ಕೊಡಬೇಕಾಗುತ್ತದೆ ಮತ್ತು ಆ ನಿಟ್ಟಿನಲ್ಲಿಯೂ ಚರ್ಚೆ ನಡೆಯಬೇಕಾಗುತ್ತದೆ.

ಈ ಗುಂಪಿನ ಶಿಕ್ಷಕ ಶಿಕ್ಷಕರು ಓದುವಿಕೆಯನ್ನು ಕಡ್ಡಾಯ ಪತ್ರಿಕೆಯನ್ನಾಗಿ ಮಾಡಬೇಕು, ಅದರಲ್ಲಿ ಮುಖ್ಯವಾಗಿ ಓದುವಿಕೆಯ ಸೈದ್ಧಾಂತಿಕ ತಿಳಿವಳಿಕೆಯನ್ನು ರೂಪಿಸುವ ನಿಟ್ಟಿನಲ್ಲಿ ಗಮನ ಹರಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆಗ ಸಿದ್ಧಾಂತ ಮತ್ತು ಅಭ್ಯಾಸಗಳ ನಡುವಿನ ಅಂತರವನ್ನು ಚರ್ಚಿಸಬಹುದಾಗಿದೆ ಮತ್ತು ಕಾರ್ಯಕ್ರಮದಲ್ಲಿ ಕಲಿತ ಸಿದ್ಧಾಂತಗಳನ್ನು ಬೋಧನಾ ವಿಧಾನದಲ್ಲಿ ಅಳವಡಿಸಿಕೊಳ್ಳುವತ್ತ ಗಮನ ಹರಿಸಬೇಕಾಗುತ್ತದೆ. ನಿಜ ಹೇಳಬೇಕೆಂದರೆ ಒಬ್ಬ ಶಿಕ್ಷಕ ಶಿಕ್ಷಕರು ಎಲ್ಲಾ ಸ್ನಾತಕಪೂರ್ವ ಕಾರ್ಯಕ್ರಮಗಳಲ್ಲೂ ಓದುವಿಕೆ ಕಡ್ಡಾಯವಾದ ಮೂಲಭೂತ ಪತ್ರಿಕೆಯಾಗಬೇಕು ಎಂಬುದಕ್ಕೆ ಹೆಚ್ಚಿನ ಒತ್ತು ನೀಡಿದರು.

**ವಿದ್ಯಾರ್ಥಿ ಶಿಕ್ಷಕರ ಅಭಿಪ್ರಾಯಗಳು**

ಈ ಭಾಗವು ವಿದ್ಯಾರ್ಥಿ ಶಿಕ್ಷಕರು ತಮ್ಮ ಶಾಲೆಯಲ್ಲಿ ಎದುರಿಸುವ ಸವಾಲುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಶಿಕ್ಷಕ ತರಬೇತಿ ಕಾರ್ಯಕ್ರಮದಲ್ಲಿ ಓದುವಿಕೆಯ ಘಟಕದ ಪರಿಣಾಮಕಾರಿತ್ವವನ್ನು ಶೋಧಿಸುತ್ತದೆ. ವಿದ್ಯಾರ್ಥಿ ಶಿಕ್ಷಕರ ಅಭಿಪ್ರಾಯಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ನಡೆಸಲಾಯಿತು; ಅವರಿಗೆ ತಾವು ಅಧ್ಯಯನ ಮಾಡುತ್ತಿರುವ ಓದುವಿಕೆ ಕೋರ್ಸಿನ ಬಗ್ಗೆ ಏನನ್ನಿಸಿತು; ಆ ಕೋರ್ಸಿನ ಓದುವಿಕೆಯ ಘಟಕವು ಅವರಿಗೆ ತಮ್ಮ ಪ್ರಯೋಗದಲ್ಲಿ ಹಾಗೂ ತದನಂತರ ವೃತ್ತಿಯಲ್ಲಿ ಸಹಾಯಕಾರಿಯಾಯಿತೇ ಎಂಬುದರ ಕುರಿತು ಚರ್ಚಿಸಲಾಯಿತು. ಅಂತಿಮವಾಗಿ ಓದುವಿಕೆ ಕಾರ್ಯಕ್ರಮ ತೃಪ್ತಿಕರವಾಗಿತ್ತೇ ಅಥವಾ ಇಲ್ಲವೇ ಎಂದೂ ವಿದ್ಯಾರ್ಥಿ ಶಿಕ್ಷಕರನ್ನು ಕೇಳಲಾಯಿತು.

ಬಹುತೇಕ ವಿದ್ಯಾರ್ಥಿ ಶಿಕ್ಷಕರು  ತರಬೇತಿ ಕಾರ್ಯಕ್ರಮದ ಓದುವಿಕೆಯ ಘಟಕವು ತರಗತಿಗೆ ಅಗತ್ಯವಿರುವ ಪರಿಣತಿ ನೀಡುವಷ್ಟು ಸಮರ್ಪಕವಾಗಿರಲಿಲ್ಲವೆಂದು ಒಪ್ಪಿಕೊಂಡರು. ತರಗತಿಯಲ್ಲಿ ಅವರು ಎದುರಿಸುವ ವಿವಿಧ ಬಗೆಯ ಸವಾಲುಗಳು ಮತ್ತು ಸಮಸ್ಯೆಗಳನ್ನು ಅವರು ಹಂಚಿಕೊಂಡರು.

ಮೊದಲಿಗೆ, ಓದುವಿಕೆ ಮತ್ತು ಅದರ ಬೋಧನಾ ವಿಧಾನದ ಆಚರಣೆಗಳನ್ನು ಅವರು ವ್ಯಾಖ್ಯಾನಿಸಿದ ರೀತಿಯನ್ನು ಗಮನಿಸಿದರೆ ಓದುವಿಕೆಯ ಕುರಿತಾದ ಅವರ ತಿಳಿವಳಿಕೆ ತೀರಾ ಸೀಮಿತವಾದುದಾಗಿತ್ತು. ಓದುವುದೆಂದರೆ ಪದಗಳನ್ನು ಗಟ್ಟಿಯಾಗಿ ಉಚ್ಚರಿಸುವುದಕ್ಕಿಂತ ಮಿಗಿಲಿನದ್ದಲ್ಲ ಎಂದು ಅವರು ನಂಬಿದ್ದರು. ಓದುವಿಕೆ ಒಂದು ಅಧ್ಯಯನ ಕ್ಷೇತ್ರವಾಗಿ ಸಿದ್ಧಾಂತಗಳು ಹಾಗೂ ಸಂಶೋಧನೆಗಳನ್ನು ಆಧರಿಸಿದೆ ಎಂದು ಅವರಿಗೆ ಕಲ್ಪಿಸಿಕೊಳ್ಳಲು ಆಗಿರಲಿಲ್ಲ. ವಿದ್ಯಾರ್ಥಿ ಶಿಕ್ಷಕರಾಗಿ ಅವರು ವಿದ್ಯಾರ್ಥಿಗಳಲ್ಲಿ ಓದುವಿಕೆಯ ಬಗ್ಗೆ ಆಸಕ್ತಿ ಮೂಡಿಸುವಲ್ಲಿ ಅಸಮರ್ಥರಾಗಿದ್ದೇವೆ ಎಂಬುದನ್ನು ಹಂಚಿಕೊಂಡರು. ಎಲ್ಲಕ್ಕಿಂತ ಹೆಚ್ಚಾಗಿ, ಈ ಸಮಸ್ಯೆಯನ್ನು ಹೇಗೆ ನಿರ್ವಹಿಸಬೇಕು ಎಂಬುದರ ಕಲ್ಪನೆಯೂ ಅವರಿಗಿರಲಿಲ್ಲ. ಕೆಲವರು ಶಿಕ್ಷಕ ತರಬೇತಿ ಕಾರ್ಯಕ್ರಮದ ರಚನೆಯಲ್ಲಿನ ಕೆಲವು ಲೋಪದೋಷಗಳ ಬಗ್ಗೆ ಹೇಳಿದರು. ಆ ಲೋಪದೋಷಗಳಿಂದಾಗಿ ವಿದ್ಯಾರ್ಥಿ ಶಿಕ್ಷಕರಾಗಿ ಅವರು ಓದುವಿಕೆಯ ಸೈದ್ಧಾಂತಿಕ ತಿಳಿವಳಿಕೆಯೊಂದಿಗೆ ಸಜ್ಜುಗೊಳ್ಳದಂತಾಗಿತ್ತು. ಸಿದ್ಧಾಂತವನ್ನು ಬೋಧಿಸುವ ಮುನ್ನ ಬೋಧನೆಯನ್ನು ಅಭ್ಯಸಿಸುವ ವ್ಯವಸ್ಥೆಯಲ್ಲಿನ ಎಲ್ಲರಿಗೂ ವ್ಯಾಪಕವಾಗಿ ಗೊತ್ತೇ ಇರುವ ಅವ್ಯವಸ್ಥೆಯನ್ನು ಸೂಚಿಸುವ ಮೂಲಕ ಅವರು ತಮ್ಮ ದೂರನ್ನು ವಿವರಿಸಿದರು. ಈ ಅಭ್ಯಾಸವು ವಿದ್ಯಾರ್ಥಿ ಶಿಕ್ಷಕರು ಓದುವಿಕೆಯ ಕಾರ್ಯಕ್ರಮದಲ್ಲಿ ಕಲಿತಿದ್ದಕ್ಕಿಂತಲೂ ಶಾಲೆಯಲ್ಲಿ ಕಲಿತುದನ್ನ ಅವಲಂಬಿಸುವಂತೆ  ಅವರನ್ನು ಪ್ರೋತ್ಸಾಹಿಸಿತು.

ಕೆಲವು ವಿದ್ಯಾರ್ಥಿ ಶಿಕ್ಷಕರಿಗೆ ತಮ್ಮ ಶಿಕ್ಷಕ ಶಿಕ್ಷಣ ಕಾರ್ಯಕ್ರಮವು ನಾವೀನ್ಯಪೂರ್ಣವಾಗಿತ್ತು, ಏಕೆಂದರೆ ಓದುವಿಕೆ ಬಗ್ಗೆ ಒಳ್ಳೆಯ ತಿಳಿವಳಿಕೆ ತಮಗೆ ದೊರೆಯಿತು ಎಂದು ಅನ್ನಿಸಿದ್ದುಂಟು. ಅವರು ಓದುವಿಕೆ ಮತ್ತು ಬರೆಯುವಿಕೆ ಕಾಲಕಾಲಕ್ಕೆ ಹೇಗೆ ಅರ್ಥದ ಕಡೆಗೆ ಗಮನ ಹರಿಸುತ್ತದೆ ಎಂಬುದನ್ನು ಮತ್ತು ಓದುವಿಕೆಯ ಪಾರಂಪರಿಕ ಗ್ರಹಿಕೆಯಿಂದಾಚೆಗೆ ಚಲಿಸಲು ಇದು ಹೇಗೆ ಸಹಾಯ ಮಾಡಿತು ಎಂಬುದನ್ನು ವಿವರಿಸಿದರು. ಕೆಲವರು ಈ ಕ್ಷೇತ್ರದಲ್ಲೇ ಸಂಶೋಧನೆ ಕೈಗೊಳ್ಳಬೇಕೆಂದು ಮತ್ತು ಈ ಕಾರ್ಯಕ್ರಮವು ತಮ್ಮ ಕೆಲವು ಪ್ರಶ್ನೆಗಳಿಗೆ ಉತ್ತರಿಸುವುದೆಂದು ಬಯಸಿದರು. ಸೈದ್ಧಾಂತಿಕ ಜ್ಞಾನವನ್ನು ತರಗತಿಯೊಳಗೆ ಅನ್ವಯಿಸುವಾಗ ಅವರು ಎದುರಿಸಿದ ಸವಾಲುಗಳು ಅಂತಹ ಪ್ರಶ್ನೆಗಳಲ್ಲಿ ಬಹುಮುಖ್ಯವಾದುದು. ಅವರು ಸಿದ್ಧಾಂತಗಳನ್ನು ಕಲಿಯುವಾಗ ಇಂತಹ ಸವಾಲುಗಳು ಎಂದೂ ಚರ್ಚೆಯ ಒಂದು ಭಾಗವಾಗಿರಲಿಲ್ಲ ಎಂದು ನಂಬಿದ್ದರು; ಮುಖ್ಯವಾಗಿ ಅವು ಶಾಲಾ ಕಾರ್ಯಕ್ರಮದ ಅವಧಿಯಲ್ಲಿ ಅನುಭವಕ್ಕೆ ಬಂದವೆಂದು ನಂಬಿದ್ದರು. ಅಂತಹ ಸವಾಲುಗಳು ಎಲ್ಲ ಚರ್ಚೆಗಳ ಕೇಂದ್ರವಾಗಿರಬೇಕು ಮತ್ತು ಎಲ್ಲರೂ ಸಾಮೂಹಿಕವಾಗಿ ಪರಿಹಾರಗಳನ್ನು ಶೋಧಿಸಬೇಕು ಎಂದು ಅವರು ಸೂಚಿಸಿದರು. ಮುಂದುವರಿದು, ದೈನಂದಿನ ಬೋಧನೆಯ ಸಂದರ್ಭದಲ್ಲಿ ತಾವು ಹೇಗೆ ಸವಾಲುಗಳನ್ನು ಪರಿಹರಿಸಿಕೊಂಡೆವು ಎಂಬ ತಮ್ಮ ಅನುಭವವನ್ನು ಹಂಚಿಕೊಳ್ಳಲು ಶಿಕ್ಷಕರನ್ನು ಆಹ್ವಾನಿಸುವ ಒಂದು ವೇದಿಕೆಯನ್ನು ಒದಗಿಸಿಕೊಡಬೇಕೆಂದೂ ಸಹ ಅವರು ಸೂಚಿಸಿದರು.

ಈ ಸಲಹೆ ಸೂಚನೆಗಳು ನಿಜವಾಗಿಯೂ ವಿದ್ಯಾರ್ಥಿ ಶಿಕ್ಷಕರು ತರಗತಿಯೊಳಗೆ ಎದುರಿಸಿದ ಕಷ್ಟಗಳಿಂದ ಒಡಮೂಡಿದುದಾಗಿವೆ. ಇವು ಶಿಕ್ಷಕ ತರಬೇತಿ ಕಾರ್ಯಕ್ರಮದ ಉದ್ದೇಶಗಳನ್ನು ಕುರಿತು ಆಲೋಚಿಸುವುದರ ಜೊತೆಗೆ ಅವರ ಸಲಹೆಗಳನ್ನು ಕೂಡ ಪರಿಗಣಿಸಬೇಕಾಗುತ್ತದೆ ಎಂಬುದನ್ನು ಸೂಚಿಸುತ್ತದೆ.

**ಉಪಸಂಹಾರ**

ಸೇವಾಪೂರ್ವ ಶಿಕ್ಷಕ ತರಬೇತಿ ಕಾರ್ಯಕ್ರಮಗಳ ಬಗ್ಗೆ ಸಾಕಷ್ಟು ಚರ್ಚೆ, ವಿಮರ್ಶೆ ನಡೆಯಬೇಕಾಗಿದೆ ಹಾಗೂ ಬದಲಾವಣೆಗಳನ್ನು ತರಬೇಕಾಗಿದೆ ಎಂಬುದು ಪ್ರಶಿಕ್ಷಕರ ಅಭಿಪ್ರಾಯಗಳಿಂದ ಸ್ಪಷ್ಟವಾಯಿತು. ಅಲ್ಲದೇ, ಶಿಕ್ಷಕ ಶಿಕ್ಷಕರು ವಾಸ್ತವದ ತರಗತಿಯಲ್ಲಿ ಅನುಸರಿಸುವ ವಿಧಾನವನ್ನು ಸೇವಾಪೂರ್ವ ಶಿಕ್ಷಕ ಶಿಕ್ಷಣ ಕಾರ್ಯಕ್ರಮವು ಪ್ರಭಾವಿಸುವುದರಿಂದ ಸೇವಾಪೂರ್ವ ತರಬೇತಿಯ ಆಮೂಲಾಗ್ರ ಪರಿಶೀಲನೆ ಆಗಬೇಕಿದೆ. ಈ ಆಮೂಲಾಗ್ರ ಪರಿಶೀಲನೆ ಆಗದೇ ಹೋದರೆ ಅವರು ಓದುವಿಕೆಯ ಪಾರಂಪರಿಕ ತಿಳಿವಳಿಕೆಯ ಪ್ರಕಾರವೇ ತಮ್ಮ

ಬೋಧನೆಯನ್ನು ಮುಂದುವರಿಸುತ್ತಾರೆ ಮತ್ತು ತರಗತಿಯಲ್ಲಿ ಮಕ್ಕಳು ಓದುವಿಕೆಯನ್ನು ಅರ್ಥಹೀನವಾದ ಯಾಂತ್ರಿಕವಾದ ಪ್ರಕ್ರಿಯೆಯಂತೆ ಪರಿಭಾವಿಸಿ ಅದನ್ನೇ ಅನುಸರಿಸುತ್ತಾರೆ.

***

**ಪರಾಮರ್ಶನೆಗಳು**


Kumar, K. (1992). *What is worth teaching?* New Delhi: Orient Longman.

Sinha, S. (2010). Literacy instruction in Indian schools. In A. Nikolopoulou, T.Abraham and F. Mirbagheri (Eds.), *Education for sustainable development: Challenges, strategies, and practices in a globalizing world* (pp.117-128). New Delhi: Sage Publications.



**ಪೂಜಾ ಬಹುಗುಣ** ದೆಹಲಿ ವಿಶ್ವವಿದ್ಯಾಲಯದ, ಶಿಕ್ಷಣ ವಿಭಾಗದಲ್ಲಿ ಪಿಎಚ್‌ಡಿ ವಿದ್ವಾಂಸರಾಗಿದ್ದಾರೆ. ಆಧುನಿಕ/ತುರ್ತು ಸಾಕ್ಷರತೆ ಮತ್ತು ಅರ್ಥಗ್ರಹಿಕೆ ವಿಷಯಗಳು ಅವರ ಸಂಶೋಧನಾ ಆಸಕ್ತಿಯ ವಿಷಯಗಳಾಗಿವೆ.

pooja_bahuguna@yahoo.com


**ಚಿಂತನಾತ್ಮಕ ಪ್ರಶ್ನೆಗಳು:**

1. ಭಾರತೀಯ ಭಾಷಾ ತರಗತಿಗಳಲ್ಲಿ ಓದುವಿಕೆಯ ಮಹತ್ವವೇನು? ಚರ್ಚಿಸಿ.
2. ಓದುವಿಕೆ ತರಬೇತಿಯ ಸಂಬಂಧವಾಗಿ ಭಾರತೀಯ ಶಿಕ್ಷಕ ಶಿಕ್ಷಕರು ಎದುರಿಸುತ್ತಿರುವ ಸವಾಲುಗಳು ಯಾವುವು?
3. ವ್ಯಕ್ತಿಯ ಶೈಕ್ಷಣಿಕ ಪ್ರಗತಿಯಲ್ಲಿ ಓದುವಿಕೆಯು ಬಹಳ ಮಹತ್ವ ಹೊಂದಿದೆ. ಅಲ್ಲವೇ? ವಿಚಾರಮಾಡಿ


**ಅನುವಾದ**: ಟಿ. ಎನ್. ವಾಸುದೇವಮೂರ್ತಿ / **ಪರಿಶೀಲನೆ**: ನಾಗಮಣಿ ಎಸ್. ಎನ್.

ಮೂಲ: *Language and Language Teaching* Volume 5 Number 1 Issue 9 January 2016